ಕರ್ನಾಟಕ ಸರ್ಕಾರ ಸಿಆರ್‌ಪಿ.67

| |
|---|
| ಹೇಳಿಕೆ ಹಾಳೆ<br>ಆರ್‌ಪಿ.ಸಂ.57<br>ನಮೂನೆ ಸಂ.4<br>(ಸಿವಿಲ್) |

## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, (ಎಂ.ಎ.ಸಿ.ಟಿ.) ಕುಂದಾಪುರ.

**ಎಂ. ವಿ. ಸಿ. ಸಂಖ್ಯೆಃ 424-19 ಆರ್ ಡಬ್ಲ್ಯೂಃ1**

**ಸಾಕ್ಷಿದಾರರ ಹೆಸರು** ಃ ಡಾಃ ಪದ್ಮನಾಭ ಆಚಾರ್ಯ
**ತಂದೆ ಹೆಸರು** ಃ ಸುಬ್ರಾಯ ಆಚಾರ್ಯ
**ವಯಸ್ಸು** ಃ 60
**ವೃತ್ತಿ** ಃ ವೈದ್ಯಾಧಿಕಾರಿ, ಶ್ರೀ ದುರ್ಗಾ ಆಸ್ಪತ್ರೆ, ಹಾಲಾಡಿ
**ವಾಸ** ಃ ಹಾಲಾಡಿ

**ದಿಃ 04-03-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ- 2 ನೇ ಎದುರುದಾರ ಪರ ವಕೀಲರಾದ ಶ್ರೀ ಎನ್ ಪಿ ಎನ್ ರವರಿಂದ

ನಾನು ಹಾಲಾಡಿಯಲ್ಲಿರುವ ಶ್ರೀ ದುರ್ಗಾ ಆಸ್ಪತ್ರೆಯ ಮಾಲೀಕನಾಗಿದ್ದು, ಅಲ್ಲಿ ವೈದ್ಯಕೀಯ ವೃತ್ತಿಯನ್ನು ಮಾಡುತ್ತಿದ್ದೇನೆ.

ನನಗೆ ಈ ಪ್ರಕರಣದಲ್ಲಿ ದಾಖಲಾತಿ ಹಾಜರುಪಡಿಸಿ ಸಾಕ್ಷ್ಯ ನುಡಿಯಲು ಮಾನ್ಯ ನ್ಯಾಯಾಲಯದಿಂದ ಸಮನ್ಸು ಬಂದ ಪ್ರಕಾರ ನಾನು ಈ ದಿನ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ.

ನನಗೆ ನ್ಯಾಯಾಲಯದಿಂದ ಬಂದ ಸಮನ್ಸು ಪ್ರಕಾರ ನಾನು ನ್ಯಾಯಾಲಯಕ್ಕೆ ದಾಖಲಾತಿ ಹಾಜರುಪಡಿಸಿಲ್ಲ.

ಕೆಎಂಸಿ ಆಸ್ಪತ್ರೆಯ ವೈದ್ಯಕೀಯ ಕಡತ ನಿಆರ್-1 ರಲ್ಲಿ ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ನಂತರ ಮುಂದುವರಿದ ಚಿಕಿತ್ಸೆ ಪಡೆಯಲು ದಾಖಲಾಗಿದ್ದ ಅಂತ ದಾಖಲಾತಿಯಲ್ಲಿ ಕಂಡು ಬರುತ್ತದೆ ಎಂದರೆ ಸರಿ. ನಮ್ಮ ಆಸ್ಪತ್ರೆಯಲ್ಲಿ ಗಾಯಾಳು ದಾಖಲಾಗಿದ್ದಲ್ಲಿ ಅವನಿಗೆ ಪ್ರಥಮ ಚಿಕಿತ್ಸೆಯನ್ನು ನಾವು ನೀಡಿರುತ್ತೇವೆ ಮತ್ತು ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಎಲ್‌ಸಿ ರೆಕಾರ್ಡ ನಲ್ಲಿ ದಾಖಲು ಮಾಡಿ ಸಂಬಂಧಪಟ್ಟ ಪೋಲೀಸು ಇಲಾಖೆಗೆ ನಾವು ಎಂಎಲ್‌ಸಿ ನೋಟೀಸನ್ನು ನೀಡುತ್ತೇವೆ ಮತ್ತು ಸದ್ರಿ ದಾಖಲಾತಿ ಇಂಡಿಯನ್ ಮೆಡಿಕಲ್ ಕೌನ್ಸಿಲ್ ಆ್ಯಕ್ಟ 1956 ರ ಪ್ರಕಾರ ನಾವು ನಿಯಮಾವಳಿಯನ್ನು ಪಾಲಿಸುತ್ತೇವೆ. ಈ

ಪ್ರಕರಣದಲ್ಲಿ ನಾನು ಗಾಯಾಳುವನ್ನು ಪರೀಕ್ಷೆ ಮಾಡಿಲ್ಲ ಅವನು ನಮ್ಮ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನಮ್ಮ ಆಸ್ಪತ್ರೆಯಲ್ಲಿ ಯಾವುದೇ ದಾಖಲಾತಿ ಲಭ್ಯವಿಲ್ಲ. ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ನನ್ನ ಹತ್ತಿರ ಚಿಕಿತ್ಸೆ ಪಡೆದುಕೊಂಡಿಲ್ಲ. ಆದರೆ ನನ್ನ ಅನುಪ ಸ್ಥಿತಿಯಲ್ಲಿ ಅವನು ಪ್ರಥಮ ಚಿಕಿತ್ಸೆ ಪಡೆದುಕೊಂಡಿದ್ದಾನೋ ಇಲ್ಲವೋ ಅಂತ ನನಗೆ ಹೇಳಲಿಕ್ಕೆ ಬರುವುದಿಲ್ಲ. ನಮ್ಮ ಆಸ್ಪತ್ರೆಯಿಂದ ಯಾವುದೇ ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಸೂಚಿಸುವ ಸಮಯದಲ್ಲಿ ನಮ್ಮ ಆಸ್ಪತ್ರೆಯಲ್ಲಿ ಅವನು ಯಾವ ಸ್ಥಿತಿಯಲ್ಲಿ ದಾಖಲಾಗಿದ್ದ ಅವನಿಗೆ ಯಾವ ರೀತಿಯ ಪ್ರಥಮ ಚಿಕಿತ್ಸೆ ನೀಡಲಾಯಿತು ಮತ್ತು ಅವನಿಗೆ ಯಾವ ಕಾರಣದಿಂದ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇದೆ ಎನ್ನುವ ಬಗ್ಗೆ ಶಿಫಾರಸ್ಸು ಮಾಡಿ ದಾಖಲಾತಿಯನ್ನು ನಮ್ಮ ಆಸ್ಪತ್ರೆಯಲ್ಲಿ ಇಟ್ಟುಕೊಳ್ಳುತ್ತೇವೆ. ಈ ಪ್ರಕರಣದಲ್ಲಿ ಗಾಯಾಳು ನಮ್ಮ ಆಸ್ಪತ್ರೆಯಿಂದ ಪ್ರಥಮ ಚಿಕಿತ್ಸೆ ಪಡೆದುಕೊಂಡು ಅವನು ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಆಸ್ಪತ್ರೆಗೆ ನಮ್ಮ ಆಸ್ಪತ್ರೆಯಿಂದ ಸೂಚಿಸಲ್ಪಟ್ಟಿದ್ದಾನೆ ಎನ್ನುವ ಬಗ್ಗೆ ನಮ್ಮ ಆಸ್ಪತ್ರೆಯಲ್ಲಿ ಯಾವುದೇ ದಾಖಲಾತಿ ಇಲ್ಲಾ. ಈ ಪ್ರಕರಣದಲ್ಲಿ ಗಾಯಾಳುವನ್ನು ನಾವು ಪರೀಕ್ಷೆ ಮಾಡಿ ಅದು ಎಂಎಲ್‌ಸಿ ಪ್ರಕರಣ ಆಗದೇ ಇರುವ ಕಾರಣ ನಾವು ಯಾವುದೇ ದಾಖಲಾತಿಯನ್ನು ಆಸ್ಪತ್ರೆಯಲ್ಲಿ ದಾಖಲಿಸಿಲ್ಲ ಎಂದರೆ ಸರಿ ಅಲ್ಲಾ. ನಮ್ಮ ಆಸ್ಪತ್ರೆಯಲ್ಲಿ ನನ್ನನ್ನು ಹೊರತುಪಡಿಸಿ ನನ್ನ ಹೆಂಡತಿ ಡೈನಾಕೊಲಜಿಸ್ಟ ಸೇವೆ ಸಲ್ಲಿಸುತ್ತಾಳೆ. ನಮ್ಮ ಆಸ್ಪತ್ರೆಯಲ್ಲಿ ಯಾವತ್ತೂ ಯಾವುದೇ ಸಮಯದಲ್ಲಿ ಯಾವುದೇ ವ್ಯಕ್ತಿ ಚಿಕಿತ್ಸೆಗೆ ಬಂದಲ್ಲಿ ನಾನು ಮತ್ತು ನನ್ನ ಹೆಂಡತಿ ಕೂಡಲೇ ಸ್ಪಂದಿಸಿ ಅವರಿಗೆ ಚಿಕಿತ್ಸೆ ನೀಡುತ್ತೇವೆ. ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ಹಾಜರುಪಡಿಸುವಂತೆ ಹೇಳುವಂತಹಾ ದಾಖಲಾತಿಯನ್ನು ಹಾಜರುಪಡಿಸಿದ್ದಲ್ಲಿ ನಿಜ ಸ್ಥಿತಿ ಬಯಲಾಗುತ್ತದೆ ಅಂತ ಹೇಳಿ ಉದ್ದೇಶ ಪೂರಕವಾಗಿ ನಮ್ಮ ಆಸ್ಪತ್ರೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲಾ.

**<u>ಪಾಟೀ ಸವಾಲುಃ</u>** ಅರ್ಜಿದಾರ ಪರ ವಕೀಲರು ಪಾಟೀ ಸವಾಲು ಇಲ್ಲಾ ಅಂತ ಹೇಳಿದ್ದರಿಂದ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ</u>** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**(ಎಂ.ಎ.ಸಿ.ಟಿ.) ಕುಂದಾಪುರ**